# ಚಿಕ್ಕೋಡಿ ಲೋಕಸಭಾ ಮತಕ್ಷೇತ್ರ: ಏಪ್ರೀಲ್ 16ರವರೆಗೆ ಒಂದು ಕೋಟಿ ರೂ. ನಗದು ವಶಕ್ಕೆ

ಚಿಕ್ಕೋಡಿ (ಏ.16): ಲೋಕಸಭಾ ಸಾರ್ವತ್ರಿಕ ಚುನಾವಣೆ-2024ಕ್ಕೆ ಸಂಬಂಧಿಸಿದಂತೆ ಮಾ.16 ರಂದು ನೀತಿ ಸಂಹಿತೆ ಜಾರಿಯಾಗಿದ್ದು ಚಿಕ್ಕೋಡಿ ಲೋಕಸಭಾ ಮತಕ್ಷೇತ್ರದಲ್ಲಿ ಮಾ. 16 ರಿಂದ ಏಪ್ರೀಲ್ 16ರ ವರೆಗೆ 1,16,68,350 ರೂ. ನಗದನ್ನು ವಶಕ್ಕೆ ಪಡೆಯಲಾಗಿರುತ್ತದೆ ಎಂದು ಚಿಕ್ಕೋಡಿ ಲೋಕಸಭಾ ಮತಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ ಸಿ.ಇ.ಓ. ಆದ ರಾಹುಲ ಶಿಂಧೆ ಅವರು ತಿಳಿಸಿರುತ್ತಾರೆ.




ಚಿಕ್ಕೋಡಿ ಲೋಕಸಭಾ ಮತಕ್ಷೇತ್ರದಲ್ಲಿ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವ ನಿಟ್ಟಿನಲ್ಲಿ 32 ಚೆಕ್ ಪೋಸ್ಟಗಳನ್ನು ನಿರ್ಮಿಸಲಾಗಿರುತ್ತದೆ. 148 ಸೆಕ್ಟೆರ ಅಧಿಕಾರಿಗಳು, 96 ಎಸ್.ಎಸ್.ಟಿ, 29 ಎಫ್.ಎಸ್.ಟಿ, 25 ವಿ.ಎಸ್.ಟಿ, 08 ವೀಡಿಯೋ ವೀವಿಂಗ ತಂಡಗಳನ್ನು ರಚಿಸಲಾಗಿದ್ದು ಈ ತಂಡಗಳು ದಿನದ ಇಪ್ಪತ್ತನಾಲ್ಕು ಗಂಟೆಯು ಕಾರ್ಯಪ್ರವೃತ್ತವಾಗಿರುತ್ತವೆ.

ಮಾದರಿ ನೀತಿ ಸಂಹಿತೆ ಜಾರಿಯಾದಾಗಿನಿಂದ ಏ.16 ರವರೆಗೆ ಚಿಕ್ಕೋಡಿ ಲೋಕಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ರಚಿಸಲಾದ ವಿವಿಧ ಮಾದರಿ ನೀತಿ ಸಂಹಿತೆ ತಂಡಗಳು 1,16,68,350 ರೂ. ನಗದು, 7,05,036.74 ರೂ. ಮೌಲ್ಯದ 1948.151 ಲೀ. ಮದ್ಯ, 2,21,250 ರೂ. ಮೌಲ್ಯದ 8.813 ಕೆ.ಜಿ. ಮಾದಕ, ಅಮಲು ಪದಾರ್ಥಗಳು ಹಾಗೂ 9,88,205 ರೂ. ಮೌಲ್ಯದ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿರುತ್ತದೆ. ವಿವಿಧ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಅಡಿಯಲ್ಲಿ ಒಟ್ಟು 79 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.

ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ಜರುಗಿಸಲು ಚಿಕ್ಕೋಡಿ ಲೋಕಸಭಾ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಹಾಯವಾಣಿಗಳನ್ನು ತೆರೆಯಲಾಗಿದ್ದು ಚಿಕ್ಕೋಡಿ ಲೋಕಸಭಾ ಚುನಾವಣಾಧಿಕಾರಿಗಳ ಕಾರ್ಯಾಲಯ 08338-272132,272130, ನಿಪ್ಪಾಣಿ-08338-220030, ಚಿಕೋಡಿ-ಸದಲಗಾ- 08338-272130, ಅಥಣಿ-08289-469501, ಕಾಗವಾಡ-08339-264555, ಕುಡಚಿ-9845986105, ರಾಯಬಾಗ-8867519106, ಹುಕ್ಕೇರಿ-08333-265036, ಯಮಕನಮರಡಿ-08333-200308 ಹಾಗೂ ಚುನಾವಣಾ ಸಹಾಯವಾಣಿ 1950 ಗೆ ಸಾರ್ವಜನಿಕರು ಕರೆ ಮಾಡಿ ಚುನಾವಣೆಗೆ ಸಂಬಂಧಿತ ಮಾಹಿತಿ ಹಾಗೂ ದೂರುಗಳನ್ನು ಸಲ್ಲಿಸಬಹುದಾಗಿರುತ್ತದೆ.

ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಈಗಾಗಲೇ ಮಾದರಿ ನೀತಿ ಸಂಹಿತೆ ಜಾರಿಯಲಿದ್ದು ಸಾರ್ವಜನಿಕರು ಐವತ್ತು ಸಾವಿರಕ್ಕಿಂತ ಹೆಚ್ಚಿನ ನಗದನ್ನು ಸಾಗಣೆ ಮಾಡುವಂತಿಲ್ಲ. ಪ್ರಚಾರ ಸಭೆ ಮತ್ತು ಸಮಾರಂಭ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದಿಂದ, ಸಹಾಯಕ ಚುನಾವಣಾಧಿಕಾರಿ ಹಾಗೂ ಏಕಗವಾಕ್ಷಿ ವತಿಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕಾಗಿರುತ್ತದೆ. ಚುನಾವಣಾ ಪ್ರಚಾರ ಸಂದರ್ಭದಲ್ಲಿ ವೈಯಕ್ತಿಕ ನಿಂಧನೆ, ಧಾರ್ಮಿಕ ನಿಂಧನೆ, ಟೀಕೆ, ಅವಮಾನ, ಅವಹೇಳನಕಾರಿ ಭಾಷಣಗಳನ್ನು ಮಾಡದಂತೆ ಹಾಗೂ ಪ್ರಚಾರ ಕಾರ್ಯಕ್ಕೆ ಬಳಸಲಾಗುವ ವಾಹನಗಳಿಗೆ ಕಡ್ಡಾಯವಾಗಿ ಅನುಮತಿ ಪಡಯಬೇಕಾಗಿರುತ್ತದೆ ಎಂದು ಚಿಕ್ಕೋಡಿ ಲೋಕಸಭಾ ಮತಕ್ಷೇತ್ರದ ಚುನಾವಣಾಧಿಕಾರಿಗಳಾದ ರಾಹುಲ ಶಿಂಧೆ ಅವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಡಾ. ಬಿ ಆರ್ ಅಂಬೇಡ್ಕರ್ ಅವರ ಬದುಕು ಎಲ್ಲರಿಗೂ ಸ್ಪೂರ್ತಿ



ಮೂಡಲಗಿ : ಡಾ. ಬಿ ಆರ್ ಅಂಬೇಡ್ಕರ್ ಅವರ ಬದುಕು ಎಲ್ಲರಿಗೂ ಸ್ಪೂರ್ತಿ, ಸಮಾನತೆ, ಪ್ರಗತಿಯ ಕನಸು ಕಂಡ ಮೇರು ನಾಯಕ ನಮ್ಮ ಹೆಮ್ಮಯ ಸಂವಿಧಾನ ಶಿಲ್ಪಿ. ಅವರು ಎಲ್ಲರಿಗೂ ನೀಡಿದಂತಹ ಮತದಾನದ ಹಕ್ಕು ಇಂದಿನ ದಿನಗಳಲ್ಲಿ ಮೌಲ್ಯ ಕಳೆದುಕೊಂಡಿದೆ ಎಂದು ಉಪನ್ಯಾಸಕ ಬಾಹುಸಾಹೇಬ ಕಾಂಬಳೆ ಅಸಮಾದಾನ ವ್ಯಕ್ತಪಡಿಸಿದರು.

ರವಿವಾರದಂದು ಪಟ್ಟಣದ ಶ್ರೀ ಶ್ರೀಪಾದಭೋಧ ಸ್ವಾಮಿಜಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಸಭಾ ಭವನದಲ್ಲಿ ತಾಲೂಕಾಡಳಿತ, ತಾಲೂಕಾ ಪಂಚಾಯತ, ಪುರಸಭೆ ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಸಮಾಜ ಕಲ್ಯಾಣ ಇಲಾಖೆ ಗೋಕಾಕ ಇವರ ಆಶ್ರಯದಲ್ಲಿ ಜರುಗುದ, ಡಾ ಬಿ ಆರ್ ಅಂಬೇಡ್ಕರರವರ 133ನೇ ಜಯಂತಿಯ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಲಿತರು ಬಾಬಾಸಾಹೇಬರ ಜಯಂತಿಯನ್ನು ಆಚರಿಸುವುದರ ಜೊತೆಗೆ ಬಾಬಾಸಾಹೇಬರು ನಮ್ಮಗಾಗಿ ಏನು ಕೊಡುಗೆ ನೀಡಿದ್ದಾರೆ ಆ ಕೊಡುಗೆ ಏನು ಹೇಗೆ ಅನ್ನುವುದನ್ನು ಅರಿತು, ನಮ್ಮ ಮಕ್ಕಳಿಗೆ ಅವರ ಆದರ್ಶ ತತ್ವಗಳನ್ನು ತಿಳಿಸಿ ಹೇಳಿ, ಬಾಬಾ ಸಾಹೇಬ ಅಂಬೇಡ್ಕರ್ ಕಂಡತಂಹ ಕನಸನ್ನು ನಾವುಗಳು ನನಸು ಮಾಡುವಂತ ದಾರಿ ತೋರಿಸಬೇಕಿದೆ ಎಂದು ಕರೆ ನೀಡಿದರು.

ಇನ್ನೂ ನಮ್ಮ ದೇಶದಲ್ಲಿ ಸಮಾನತೆ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಹೋಗಲಾಡಿಸಲು ಬಾಬಾಸಾಹೇಬರು ಸಂವಿಧಾನದಲ್ಲಿ ತಿಳಿಸಿದ ಹಾಗೆ ಕಾರ್ಯ ರೂಪಕ್ಕೆ ಬಂದಿಲ್ಲ. ಇನ್ನೂ ಕೆಲವು ಕಡೆಗಳಲ್ಲಿ ಸಮಾನತೆ ಇಲ್ಲ, ದೇಶದಲ್ಲಿ ಶ್ರೀಮಂತ ಬಡವ ಎನ್ನುವ ಪದ್ಧತಿ ಹೋಗಿಲ್ಲ. ದಲಿತರು ಉತ್ತಮವಾದ ಶಿಕ್ಷಣ ಕಲಿತು, ಬಾಬಾಸಾಹೇಬರು ಹೇಳಿಕೊಟ್ಟಿರುವ ತತ್ವಗಳ ಮೂಲಕ ಜೀವನವನ್ನು ಸಾಗಿಸಬೇಕು ಎಂದರು.

ತಹಶೀಲ್ದಾರ ಬಿ ಎಸ್ ಕಡಕಬಾಂವಿ, ಬಿಇಒ ಅಜೀತ ಮನ್ನಿಕೇರಿ ಮಾತನಾಡಿ, ಡಾ. ಬಿ ಆರ್ ಅಂಬೇಡ್ಕರ್ ಅವರ ಬದುಕು ಎಲ್ಲರಿಗೂ ಸ್ಪೂರ್ತಿ, ಸಮಾನತೆ, ಪ್ರಗತಿಯ ಕನಸು ಕಂಡ ಮೇರು ನಾಯಕ ನಮ್ಮ ಹೆಮ್ಮಯ ಸಂವಿಧಾನ ಶಿಲ್ಪಿ. ಇವರ ಆದರ್ಶ ಎಲ್ಲರ ಜೀವನಕ್ಕೆ ದಾರಿ ದೀಪ, ಬಾಬಾ ಸಾಹೇಬರ ಚಿಂತನೆಗಳು ಇಂದಿಗೂ ಯುವಜನತೆಗೆ ಸ್ಪೂರ್ತಿ ನೀಡುತ್ತಲೇ ಇವೆ. ಬಾಬಾಸಾಹೇಬರ ಆಸೆಯಂತೆ ದಲಿತರು ದೇಶದಲ್ಲಿ ಉತ್ತಮ ನಾಯಕರಾಗಿ ಅಂಬೇಡ್ಕರರ ಹಾಗೇ ಸಾಧನೆ ಮಾಡಬೇಕು. ದಲಿತರಿಗೆ ಮಾತ್ರ ಬಾಬಾಸಾಹೇಬರು ಸಂವಿಧಾನವನ್ನು ನೀಡಿಲ್ಲ ಇಡೀ ಭಾರತೀಯ ನಾಗರೀಕರಿಗೆ ನೀಡಿದ್ದಾರೆ ಅವರು ನೀಡಿದಂತಹ ಸಂವಿಧಾನವನ್ನು ರಕ್ಷಿಸುವಂತ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಇದೇ ವೇಳೆಯಲ್ಲಿ ಕಳೆದ ಬಾರಿ ದಲಿತ ಸಮಾಜದ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಅಂತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸತ್ಕರಿಸಿ ಗೌರವಿಸಿದರು. ಡಾ. ಬಿ ಆರ್ ಅಂಬೇಡ್ಕರರವರ ಜಯಂತಿಯ ಅಂಗವಾಗಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ಒಳರೋಗಿಗಳಿಗೆ ಹಣ್ಣು ಹಂಪಲ ವಿತರಿಸಿದ ನಂತರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಿಂದ ಪ್ರಾರಂಭವಾದ ಅಂಬೇಡ್ಕರರ ಭಾವಚಿತ್ರದ ಮೆರವಣಿಗೆಯೂ ಕಲ್ಮೇಶ್ವರ ವೃತ್ತ, ಚೆನ್ನಮ್ಮ ವೃತ್ತ, ಕರೇಮ್ಮ ವೃತ್ತ, ಬಸವೇಶ್ವರ ವೃತ್ತ, ಸಂಗಪ್ಪ ವೃತ್ತದ ಮಾರ್ಗವಾಗಿ ಶಾಲಾ ಆವರಣಕ್ಕೆ ಬಂದು ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ತಾಪಂ ಇಒ ನವೀನಪ್ರಸಾದ ಕಟ್ಟಿಮನ, ಸಿಪಿಐ ಅಬ್ದುಲ್ ವಾಜೀದ್ ಪಟೇಲ್, ಪಿಎಸ್ಐ ಚಂದ್ರಶೇಖರ ಹರಕಲ್ಲ, ಪುರಸಭೆಯ ಪ್ರಭಾರಿ ಮುಖ್ಯಾಧಿಕಾರಿ ಸಿ ವಿ ಪಾಟೀಲ, ಹೆಸ್ಕಂ ಅಧಿಕಾರಿ ಎಮ್ ಎಸ್ ನಾಗನ್ನವರ, ಸಿಡಿಪಿಒ ಕಚೇರಿಯ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇಂದಿರಾ ಬೋವಿ, ಸಮಾಜ ಕಲ್ಯಾಣ ಇಲಾಖೆ ತಾಲೂಕಾ ಕಚೇರಿಯ ಅಧಿಕ್ಷಕ ಎಮ್ ಎಸ್ ಪಾಟೀಲ, ಪ್ರಾಚಾರ್ಯರ ಮಹೇಶ ಕಂಬಾರ, ವಸತಿ ನಲಯದ ನಲಯಪಾಲಕ ಯಲ್ಲಪ್ಪ ಭಂಜತ್ರಿ ಹಾಗೂ ದಲಿತ ಮುಖಂಡರು, ದಲಿತ ವಿವಿಧ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

# ಭೈರನಟ್ಟಿಯಲ್ಲಿ ಜನಸ್ತೋಮದ ಜಯಘೋಷನೆ ಜರುಗಿದ ಜಡಿಸಿದ್ಧೇಶ್ವರ ರಥೋತ್ಸವ



ಮೂಡಲಗಿ: ತಾಲೂಕಿನ ಭೈರನಟ್ಟಿ ಗ್ರಾಮದಲ್ಲಿ ಅವಧೂತ ಶ್ರೀ ಪವಾಡ ಪುರುಷ ಶ್ರೀ ಜಡಿಸಿದ್ಧೇಶ್ವರ ರಥೋತ್ಸವ ಸಡಗರ ಸಂಭ್ರಮದಿಂದ ಅಪಾರ ಜನಸ್ತೋಮ ಮಧ್ಯೆ ರುದ್ರಯ್ಯ ಅಜ್ಜನವರ ನೇತೃತ್ವ ಹಾಗೂ ಸುಣಧೋಳಿ ಜಡಿಸಿದ್ಧೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿಗಳ ಅಧ್ಯಕ್ಷತೆಯಲ್ಲಿ ಸಡಗರ ಸಂಭ್ರಮದಿಂದ ಶನವಾರ ಸಂಜೆ ಜರುಗಿತು.

ಜಾತ್ರಾಮಹೋತ್ಸವ ಅಂಗವಾಗಿ ಶನವಾರದಂದು ಬೆಳಗಿನ ಜಾವ ಜಡಿಸಿದ್ಧೇಶ್ವರ ಮೂರ್ತಿಗೆ ವಿಷೇಶ ಪೂಜೆ ಹಾಗೂ ಅಭಿಷೇಕ ಹಾಗೂ ಶ್ರೀ ಮಠದ ಭಕ್ತರು ತಮ್ಮ ತಮ್ಮ ಮನೆಯಿಂದ ಮತ್ತು ಶಕ್ತಿ ಅನುಸಾರ ದೀರ್ಘದಂಡ ನಮಸ್ಕಾರ ಸೇವೆ ಸಲ್ಲಿಸಿದ್ದರು. ಮುಂಜಾನೆ ರಥಧ ಕಳಾಸಾರೋಹನ ಹಾಗೂ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮ ಮಧ್ಯಾಹ್ನ ಮಹಾಪ್ರಸಾದ ಜರುಗಿತು.

ಸಂಜೆ 6 ಗಂಟೆಗೆ ಭೈರನಟ್ಟಿ ಗ್ರಾಮದ ಎಲ್ಲ ದೇವರುಗಳ ಹಾಗೂ ಸುಣಧೋಳಿ, ಹೊನಕುಪ್ಪಿ, ಗೋಸಬಾಳ, ಬಿಲಕುಂದಿ, ಲಕ್ಷ್ಮೇಶ್ವರ ಸೇರಿದಂತೆ ವಿವಿಧ ಸುತ್ತ-ಮುತ್ತಲಿನ ಗ್ರಾಮಗಳ ವಿವಿಧ ದೇವರುಗಳ ಪಲ್ಲಕ್ಕಿಗಳೊಂದಿಗೆ ತಳಿಲು ತೋರಣಗಳಿಂದ ಶೃಂಗಾರಗೊಂಡ ರಥೋತ್ಸವ ಶ್ರೀಗಳು ಪೂಜೆಸಲ್ಲಿಸಿದ ನಂತರ ವಿವಿಧ ವಾದ್ಯಮೇಳ, ಜನರ ಜಯಘೋಷನೆಯಲ್ಲಿ ಹಗ್ಗವಿಲ್ಲದೆ ಶ್ರೀ ಜಡಿಸಿದ್ಧೇಶ್ವರ ರಥೋತ್ಸವ ಸಡಗರ ಸಂಭ್ರಮದಿಂದ ಜರುಗಿತ್ತು. ರಥೋತ್ಸವ ಸಮಯದಲ್ಲಿ ಅಪಾರ ಭಕ್ತ ಸಮೂಹ ರಥೋತ್ಸವಕ್ಕೆ ಬೆಂಡು. ಬೇತಾಸು, ಖಾರಿಕು, ಬಾಳೆ ಹಣ್ಣು, ತೆಂಗಿನ ಕಾಯಿ ಸರ್ಮಪಿಸಿ ಪುನತರಾದರು.

# ವಣ್ಣೂರ ಸರಕಾರಿ ಕಾಲೇಜು ಅತ್ಯುತ್ತಮ ಸಾಧನೆ



ಐಶ್ವರ್ಯ. ಈರಪ್ಪ. ಅಂಗಡಿ | ಐಶ್ವರ್ಯ. ಮೋಹನ. ಬಡಿಗೇರ | ಪಾರವ್ವಾ. ಶಿವಪ್ಪಾ. ತಳವಾರ | ಕವಿತಾ. ಯ. ಹಳಬನವರ

ಗೋಕಾಕ: ಸಮೀಪದ ಬೈಲಹೊಂಗಲ ತಾಲೂಕಿನ ವಣ್ಣೂರ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಕಲಾ ವಿಭಾಗದಲ್ಲಿ ಕಾಲೇಜಿಗೆ 92.30% ರಷ್ಟು ಫಲಿತಾಂಶ ತಂದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರೆ.

4 ಡಿಸ್ಟಿಕ್ಷನ್, 12 ಪ್ರಥಮ ದರ್ಜೆ 6 ದ್ವಿತೀಯ ದರ್ಜೆ 2 ಸಾಮಾನ್ಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಇವರಲ್ಲಿ ಐಶ್ವರ್ಯ ಈರಪ್ಪ ಅಂಗಡಿ 91.83%, ಐಶ್ವರ್ಯ ಮೋಹನ್ ಬಡಿಗೇರ 90.66% , ಪಾರವ್ವ ಶಿವಪ್ಪ ತಳವಾರ 88.66% , ಕವಿತಾ ಹಳಬಣ್ಣವರ 86.16% (ಕನ್ನಡ 100ಕ್ಕೆ 100 ) ರಷ್ಟು ಅಂಕ ಪಡೆದು ಈ ವಿದ್ಯಾರ್ಥಿನಿಯರು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಈ ವಿದ್ಯಾರ್ಥಿಗಳ ಸಾಧನೆಯನ್ನು ಮೆಚ್ಚಿದ ಸಿಬಿಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ವಣ್ಣೂರ ಗ್ರಾಮದ ಸಮಸ್ತ ನಾಗರಿಕರು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗ ಅಭಿನಂದನೆ ಸಲ್ಲಿಸಿದ್ದಾರೆ.

## ಸಂಸ್ಕೃತಿ-ಸಂಸ್ಕಾರ ಶಿಬಿರದಲ್ಲಿ ಅಂಬೇಡ್ಕರ ಜಯಂತಿ ಆಚರಣೆ

# ಶಿಕ್ಷಣ ಮತ್ತು ಸಮಾನತೆಗಳು ಸಮಾಜೋನ್ನತಿಗೆ ಸಹಕಾರಿ



ಗದಗ- : ಡಾ. ಬಿ. ಆರ್. ಅಂಬೇಡ್ಕರವರು ರಚಿಸಿದ ಭಾರತದ ಸಂವಿಧಾನ ಫಲದಿಂದ ಇಂದು ನಾವು ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕವಾಗಿ ಸುಖಮಯ ಜೀವನ ನಡೆಸುತ್ತಿದ್ದೇವೆ. ಅಂಬೇಡ್ಕರವರು ತಮ್ಮ ಜೀವನದಲ್ಲಿ ಶಿಕ್ಷಣ ಪಡೆಯಲು ಅನುಭವಿಸಿದ ಕಷ್ಟನಷ್ಟ ಮತ್ತು ಸಮಾಜ ತಮಗೆ ತೋರಿದ ತಾರತಮ್ಯ, ದೌರ್ಜನ್ಯಗಳು ಮುಂದಿನ ಜನಾಂಗದವರು ಅನುಭವಿಸಬಾರದೆಂಬ ಚಿಂತನ, ವಿಚಾರ, ಹೋರಾಟಗಳಿಂದ ಜಯಗಳಿಸಿ ಇಡೀ ವಿಶ್ವಕ್ಕೆ ಮಾದರಿಯಾಗಿರುವ ಭಾರತದ ಸಂವಿಧಾನ ರಚಿಸಿ ಇಂದು ಎಲ್ಲರಿಗೂ ಮುಕ್ತವಾಗಿ ಶಿಕ್ಷಣ ದೊರೆಯುವಂತೆ ಮತ್ತು ಶತಮಾನಗಳಿಂದಲೂ ಸಮಾಜದಲ್ಲಿರುವ ತಾರತಮ್ಯ ಹೋಗಲಾಡಿಸಿ ಹಿಂದುಳಿದ ಸಮಾಜಕ್ಕೆ ಸಮಾನತೆ ಭಾಗ್ಯ ಹಾಗೂ ಇನ್ನತರೆ ಹಕ್ಕುಗಳನ್ನು ಕರುಣಿಸಿರುವರು. ಒಂದು ವೇಳೆ ಅಂಬೇಡ್ಕರರು ಸಂವಿಧಾನ ರಚಿಸಿದಿದ್ದರೆ ಇಂದು ಸಮಾಜದಲ್ಲಿ ಅವ್ಯವಸ್ಥೆ, ಅರಾಜಕತೆ, ದುರಾಡಳಿತ, ದೌರ್ಜನ್ಯಗಳು ನಡೆದು ಸುಧಾರಣೆ ಇಲ್ಲದೆ ಸಮಾಜ ಅಧೋಗತಿಯಲ್ಲಿರುತ್ತಿತ್ತು. ನಾವೆಲ್ಲ ಶಿಕ್ಷಣ ವಂಚಿತರಾಗಿ ಅಜ್ಞಾನದಿಂದ ಅಸಮಾನತೆಯ ಕರಿ ನೆರಳಿನಲ್ಲಿ ಬದುಕಿರಬೇಕಾಗುತ್ತಿತ್ತು. ಈ ಹಿನ್ನೆಲೆಯಾಗಿ ಶಿಕ್ಷಣ ಮತ್ತು ಸಮಾನತೆಗಳು ಸಮಾಜೋನ್ನತಿಗೆ ಸಹಕಾರಿಯಾಗಿವೆ ಎಂದು ಸಿದ್ಧಲಿಂಗ ನಗರದಲ್ಲಿನ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಶಿವಾನಂದ ಗಿಡ್ಡಕೆಂಚಣ್ಣವರ ತಿಳಿಸಿರುವರು.

ಎಸ್.ವಾಯ್.ಬಿ.ಎಂ.ಎಸ್. ಯೋಗಪಾಠಶಾಲೆಯ ಬಸವ ಯೋಗ ಕೇಂದ್ರ ಮತ್ತು ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ-2024 ಗದಗ ಇವರುಗಳ ಸಹಯೋಗದಲ್ಲಿ ಬೇಸಿಗೆ ರಜೆ ಪ್ರಯುಕ್ತ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗಾಗಿ ಸಿದ್ಧಲಿಂಗ ನಗರದಲ್ಲಿನ ಬಸವ ಯೋಗ ಮಂದಿರ (ಬಸವ ಪ್ರಭೆ ಕ್ಯಾಂಪಸ್) ಆವರಣದಲ್ಲಿ ನಡೆದಿರುವ ಸಂಸ್ಕೃತಿ-ಸಂಸ್ಕಾರ ಶಿಬಿರದಲ್ಲಿ ಡಾ. ಬಿ. ಆರ್. ಅಂಬೇಡ್ಕರ್‌ವರ 133 ನೇ ಜಯಂತಿ ಆಚರಣೆ ಕಾರ್ಯಕ್ರಮಕ್ಕೆ ಉಪನ್ಯಾಸಕ/ಮುಖ್ಯ ಅತಿಥಿಗಳಾಗಿ ಆಗಮಿಸಿದ ಶಿವಾನಂದ ಗಿಡ್ಡಕೆಂಚಣ್ಣವರು ಮುಂದುವರೆದು ಅಂದು ಅಂಬೇಡ್ಕರರು ಶಿಕ್ಷಣ ಪಡೆದು ಭಾರತದ ಹೆಮ್ಮೆಯ ಪುತ್ರರಾಗಿ ಬೆಳೆದರು. ನೀವೂ ಕೂಡ ಉತ್ತಮ ಶಿಕ್ಷಣ ಪಡೆದು ದೇಶ ಸೇವೆಗೆ ಸನ್ನದ್ಧರಾಗಿರೆಂದು ಶಿಬಿರಾರ್ಥಿಗಳಿಗೆ ಪ್ರೋತ್ಸಾಹ ನುಡಿ ಸೂಚಿಸಿದರು.

ಅಧ್ಯಕ್ಷತೆ ವಹಿಸಿದ ನವೃತ್ ಕೃಷಿ ವಿಜ್ಞಾನಿಗಳಾದ ಡಾ. ಎಸ್. ಕೆ. ನಾಲತ್ವಾಡಮಠ ಇವರು ಅಂಬೇಡ್ಕರರು ಒಬ್ಬ ವೈಜ್ಞಾನಿಕ ಚಿಂತಕ, ಆಧ್ಯಾತ್ಮ ಜೀವಿ, ರಾಜಕೀಯ ಮುತ್ಸದ್ಧಿ, ಕಾನೂನು ತಜ್ಞ, ನೇರ ನುಡಿಯ ಪತ್ರಕರ್ತ, ಸಾಹಿತಿ, ಅಪ್ರತಿಮ ಮಾನವತಾವದಿ, ಭಾರತದ ಸಂವಿಧಾನ ಶಿಲ್ಪಿ ಎಂದು ಅವರಿಗೆ ಗೌರವ ನುಡಿ ನಮನಗಳನ್ನು ತಿಳಿಸಿ ಹಿರಿಯರಾದ ನಾವೆಲ್ಲರೂ ಅಂಬೇಡ್ಕರವರ ತತ್ವಾದರ್ಶಗಳನ್ನು ಪರಿಪಾಲಿಸಿದರೆ ಕಿರಿಯರಾದ ಮಕ್ಕಳೂ ಕೂಡ ನಮ್ಮನ್ನು ಅನುಸರಿಸುವರು ಎಂದು ಹೇಳಿದರು.

ಶಿಬಿರಾರ್ಥಿಗಳಾದ ಕು. ಸಿಮ್ರಾನ್ ನದಾಫ್ ತನ್ನ ಭಾಷಣದಲ್ಲಿ ಅಂಬೇಡ್ಕರರು ತಿಳಿಸಿದ "ಶಿಕ್ಷಣ ಎನ್ನುವಂತಹದು ಪುರುಷರಿಗೆ ಎಷ್ಟು ಮುಖ್ಯವೋ, ಮಹಿಳೆಯರಿಗೂ ಅಷ್ಟೇ ಮುಖ್ಯ" ಎಂಬ ಮಾತನ್ನು ಸ್ಮರಿಸಿದರೆ, ಕು. ಚಿನ್ಮಯಿ ಗೌಡರ "ದೇವಾಲಯಗಳನ್ನು ಕಟ್ಟುವ ಬದಲು ವಿದ್ಯಾಲಯಗಳನ್ನು ಕಟ್ಟುವುದು ಶ್ರೇಯಸ್ಕರ" ಎಂದು ತಿಳಿಸಿದರು. ಕು. ನಿಧಿ ಕಟ್ಟಿಮನ ಅಂಬೇಡ್ಕರರ ಜೀವನ ಚರಿತ್ರೆ ಕುರಿತು ಮಾತನಾಡಿದರು. ಕು. ಅನುಷ್ಕಾ ಹಿರೇಮಠ "ಜನ ಯಾವತ್ತು ಗುಡಿ ಕಟ್ಟುವುದನ್ನು, ಗುಡಿ ಸುತ್ತುವುದನ್ನು ಗುಡಿಯೊಳಗಿರುವ ಕಲ್ಲುಗಳ ಹೊತ್ತು ಮೆರೆಸುವದನ್ನು ಬಿಟ್ಟು ಶಿಕ್ಷಣದ ಕಡೆ ನಡೆಯುತ್ತಾರೋ ಅವತ್ತು ಈ ದೇಶ ಉದ್ಧಾರವಾಗುತ್ತದೆ" ಎಂಬ ಅಂಬೇಡ್ಕರವರ ಸಂದೇಶ ವಾಣಿಯನ್ನು ವಾಚನ ಮಾಡಿದರು,

ವೇದಿಕೆಯಲ್ಲಿ ಕು. ನವೀನ ಪಲ್ಲೇದ, ಶಿಬಿರದ ಶಿಕ್ಷಕರಾದ ಎಸ್. ಎಂ. ಬುರಡಿ, ಸುನಂದಾ ಜ್ಯಾನೋಪಂತರ, ಆಮಂತ್ರಿತ ಅತಿಥಿ ವೀಣಾ ಹಿರೇಮಠ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶಿಬಿರಾರ್ಥಿಗಳಾದ ಕು. ಅದಿತಿ ಹಿರೇಮಠ, ಸಾಹಿತ್ಯ ಜಾಧವ, ತ್ರಿಶಾ ಸಿ. ಪ್ರಾರ್ಥನೆ ಹೇಳಿದರು. ಕು. ಶ್ರಾವಣಿ ಗುಡದೂರ ಸಂವಿಧಾನ ಪೀಠಿಕೆ ಪಠಣ ಮಾಡಿಸಿದರು. ಎಸ್. ಎಂ. ಬುರಡಿ ಗುರುಗಳು ವಂದಿಸಿದರು. ಶಿಬಿರ ಸಂಯೋಜಕ ಕೆ. ಎಸ್. ಪಲ್ಲೇದ ಕಾರ್ಯಕ್ರಮ ನಿರೂಪಿಸಿದರು.

# ಶ್ರೀ ಸುರೇಶ ಅಂಗಡಿ ಅವರ ಸ್ಮರಣಾರ್ಥ ಕುಸ್ತಿ ಅಖಾಡ



ಬೆಳಗಾವಿ.: ಮರಾಠ ಸಂಘಟನೆ ಬೆಳಗಾವಿ, ಜೈ ಹನುಮಾನ್ ಕುಸ್ತಿಗೀರ್ ಸಂಘಟನೆ ಸಾಗಾಂ ಬೆಳಗಾವಿಯ ಜನಪ್ರಿಯ ಸಂಸದ ಹಾಗೂ ಮಾಜಿ ಕೈಲಾಸ ರೈಲ್ವೆ ರಾಜ್ಯ ಸಚಿವರಾದ ಶ್ರೀ ಸುರೇಶ ಅಂಗಡಿ ಅವರ ಸ್ಮರಣಾರ್ಥ ಬೆಳಗಾವಿಯ ಸಾವಗಾಂವದಲ್ಲಿ ಕುಸ್ತಿಯ ಭವ್ಯ ಅಖಾಡವನ್ನು ಆಯೋಜಿಸಲಾಗಿದೆ. ಗ್ರಾಮೀಣ ಪ್ರದೇಶ. ಈ ಸಂದರ್ಭದಲ್ಲಿ ಬೆಳಗಾವಿ ಗ್ರಾಮೀಣ ಬಿಜೆಪಿ ಅಧ್ಯಕ್ಷ ಹಾಗೂ ಮರಾಠ ಮುಖಂಡ ವಿನಯ್ ವಿಲಾಸ ಕದಂ, ಖ್ಯಾತ ವೈದ್ಯ ರವಿ ಪಾಟೀಲ ಈ ರಂಗದ ಪೂಜೆ ನೆರವೇರಿಸಿದರು.ಬೆಳಗಾವಿ ಗ್ರಾಮೀಣ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಸಂಜಯ ಪಾಟೀಲ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಯುವರಾಜ ಜಾಧವ, ಮರಾಠ ಸಂಘಟನೆ ಬೆಳಗಾವಿ ಜಿಲ್ಲೆ ಉಪಾಧ್ಯಕ್ಷ ಮಹೇಶ ರೆಡೇಕರ, ಮರಾಠ ಸಂಘಟನೆ ಬೆಳಗಾವಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಹುಲ್ ಭಟ್ಕಂಡೆ, ಬೆಳಗಾವಿ ತಾಲೂಕಾ ಮರಾಠ ಸಂಘದ ಅಧ್ಯಕ್ಷ ಸಂಜಯ ಪಾಟೀಲ, ವೈದ್ಯ ಗಣಪ ಪಾಟೀಲ, ಶ್ರೀ ವಾರಕರಿ ಸೇವಾ ಪ್ರತಿಷ್ಠಾನ ಬೆಳಗಾವಿ ಅಧ್ಯಕ್ಷ ಪರಶುರಾಮ ರಾಜಾರಾಮ ತುಪ್ಪತ್, ಬೆಳಗಾವಿ ಮಾಜಿ ಮೇಯರ್ ಶಿವಾಜಿ ಸುಂತ್ಕರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮೋಹನ್. ಮೋರೆ, ಕಾರ್ಯಕ್ರಮಾಧ್ಯಕ್ಷ ನಂಗಪ್ಪ ಮೋರೆ, ಹಿಂಡ್ಲ ಗ್ರಾ.ಪಂ.ಮಾಜಿ ಅಧ್ಯಕ್ಷ ರಾಮಚಂದ್ರ ಮನೋಳ್ಕರ್, ಜೈ ಹನುಮಾನ್ ಕುಸ್ತಿಕರ ಸಂಘದ ಅಧ್ಯಕ್ಷ ರೂಪೇಶ ಪಾಟೀಲ್, ಮಾರುತಿ ಕಾಕತ್ಕರ್, ಪ್ರಕಾಶ ಪಾಟೀಲ್, ಬೆಂಕನಹಳ್ಳಿ ಗ್ರಾ.ಪಂ.ಅಧ್ಯಕ್ಷ ಡಾ.ಯಲ್ಲಪ್ಪ ಪಾಟೀಲ್, ಗಣಪ ಪಾಟೀಲ್, ಯಲ್ಲಪ್ಪ ಮೆನ್ಸೆ, ಯಲ್ಲಪ್ಪ ಕಾಕತ್ಕರ್, ಸೂರಜ್ ಪಾಟೀಲ್. , ಎಲ್ಲಾ ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಸಾವಿರಾರು ಕುಸ್ತಿ ಆಸಕ್ತರು ಉಪಸ್ಥಿತರಿದ್ದರು.

# ಜಿಮ್ಸ್ ಹೊರಗುತ್ತಿಗೆ ಕಾರ್ಮಿಕರ ಸಂಘದ ವತಿಯಿಂದ ಬಾಬಾಸಾಹೇಬ ಅಂಬೇಡ್ಕರ್ ಜಯಂತಿ ಆಚರಣೆ



ಗದಗ-15 : ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊರಗುತ್ತಿಗೆ ಕಾರ್ಮಿಕರ ಸಂಘ (ರಿ) ವತಿಯಿಂದ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ 133 ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ರಕ್ತದಾನ ಹಾಗೂ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲ ನೀಡುವುದರ ಮೂಲಕ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ಡಾ. ಬಸವರಾಜ ಬೊಮ್ಮನಳ್ಳಿ ಇವರು ಎಲ್ಲ ರೋಗಿಗಳಿಗೆ ಹಣ್ಣು-ಹಂಪಲ ವಿತರಿಸಿ ನಂತರ ಕಾರ್ಯಕ್ರಮ ಉದ್ದೇಶಸಿ ಮಾತನಾಡಿದ ಅವರು ರಕ್ತದಾನ ಮಾಡಿದ ಎಲ್ಲ ಸಿಬ್ಬಂದಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದರು. ಕಾರ್ಯಕ್ರಮ ಅತಿಥಗಳಾಗಿ ಆಗಮಿಸಿದ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಶ್ರೀಮತಿ ರೇಖಾ ಸೋನಾವನೆ ಅವರು ಹಾಗೂ ಅಶೋಕ ಆಚಾರ ಮತ್ತು ಹಿರಿಯ ನರ್ಸಿಂಗ ಅಧಿಕಾರಿಗಳಾದ ಜಡಿ ಮೇಡಂ ಮತ್ತು ಸಂಘದ ಪದಾಧಿಕಾರಿಗಳಾದ ರಾಜು ಸಾಬೋಜಿ, ರಾಘವೇಂದ್ರ ನಾಗನಾಥನಹಳ್ಳಿ, ವಿವೇಕ ಮಾನೆ, ಹುಲಿಗೇಶ ಬಳ್ಳಾರಿ, ಮೈಲಾರಿ ಹಾದಿಮನಿ, ಮಂಜುನಾಥ ರಾಮೇನಹಳ್ಳಿ, ಹುಲಿಗೇಶ ಚೌಡಮ್ಮನವರ, ಭೀಮಪ್ಪ ದೊಡ್ಡಮನಿ, ಇಜಾಜಖಾನ ಧಾರವಾಡ, ಮಮತಾಜ ರೋಣ, ರಜಿಯಾ ಅನ್ಸಾರೆ, ವಿಜಯಲಕ್ಷ್ಮೀ ಗೊಲ್ಲರ, ವೇದಾ ಸುಣಗಾರ, ನಾಗರಾಜ ಯರಗುಡಿ, ಮಂಜುನಾಥ ದೊಡ್ಡಮನಿ, ಶರಣಪ್ಪ ಚಿನ್ನಮ್ಮನವರ, ಮಾಂತೇಶ ದೊಡ್ಡಮನಿ, ಸಾಗರ ಚಲವಾದಿ, ಚಂಪಾವತಿ ಗುಳೇದ, ಮಾರ್ತಾಂಡ ಹೊನ್ನನಾಯ್ಕರ್, ಕಿರಣ ಮಡಿವಾಳರ, ಪ್ರವೀಣ ಅಸೂಟಿ, ಮಾಂತೇಶ ಹಾದಿಮನಿ, ಮಂಜುನಾಥ ಪೂಜಾರ, ದುರಗಪ್ಪ ಚೌಳಪ್ಪನವರ, ಮಲ್ಲಪ್ಪ ಹಾದಿಮನಿ, ಸಂತೋಷ ಚಲವಾದಿ ಹಾಗೂ ಎಲ್ಲ ನರ್ಸಿಂಗ್ ಆಫೀಸರ್, ಡಾಕ್ಟರ್ಸ್ ಹಾಗೂ ಎಲ್ಲಾ ಹೊರಗುತ್ತಿಗೆ ಕಾರ್ಮಿಕರು ಉಪಸ್ಥಿತರಿದ್ದರು. ಸಂತೋಷ ಚಲವಾದಿ ಹಾಗೂ ಎಲ್ಲ ನರ್ಸಿಂಗ್ ಆಫೀಸರ್, ಡಾಕ್ಟರ್ಸ್ ಹಾಗೂ ಎಲ್ಲಾ ಹೊರಗುತ್ತಿಗೆ ಕಾರ್ಮಿಕರು ಉಪಸ್ಥಿತರಿದ್ದರು.